॥ ಶ್ರದ್ಧಾ ಹಿ ಪರಮಾ ಗತಿಃ ॥

ಎನ್.ಇ.ಎಸ್. ಶತಮಾನೋತ್ಸವ ಪ್ರಕಟಣೆ

100

# ಚಳುವಳಿಗಳು ಮತ್ತು ಹೊಸಗನ್ನಡ ಸಾಹಿತ್ಯ

## ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿತವಾದ ಲೇಖನಗಳ ಸಂಕಲನ




ಡಾ. ಕೆ. ಪಿ. ನಾರಾಯಣಪ್ಪ
ಸಂಪಾದಕರು

ಡಾ. ಬಿ. ಆರ್. ಪರಿಣೀತಾ
ಪ್ರಧಾನ ಸಂಪಾದಕರು

ಕನ್ನಡ ವಿಭಾಗ

ನ್ಯಾಷನಲ್ ಕಾಲೇಜು (ಸ್ವಾಯತ್ತ)

ನ್ಯಾಕ್ 'ಎ' ಶ್ರೇಣಿ ಮಾನ್ಯತೆ ಪಡೆದಿದೆ

Proceedings of the One Day National Level Seminar on " **Chaluvaligalu Mattu Hosagannada Sahithya**" organized by **National College (Autonomous)**, Jayanagar, Bengaluru - 560 070.
**Year of Publication : 1st Edition 2018**
**Volume : 1**

**Copyright © [2018] [National College, Jayanagar, Bengaluru-70] All Rights Reserved.**

No Part of this book may be reproduced or transmitted in any form or by any means, electronic or mechanical, including photocopying, recording or by any information storage and retrieval system without permission in writing from the publisher.

Size : A4
Paper : 75 GSM
Binding : Paper Back
No. of Pages : 400
No. of Copies : 150
ISBN : 978-81-933447-7-4
Price : Rs. 525/-

**Published by:**
The Principal
National College
Jayanagar, Bengaluru - 560 070.

**Chief - Editor**
Dr. B. R. Parineetha

**Editor**
Dr. K. P. Narayanappa

**Co-Editiors**
Dr. B. Papanna
Prof. V. Savitha
Prof. R. Ravikumara

**Printed at:**
Sneha Printers
Bangalore

**Disclaimer**

Although every precaution has been taken in the preparation of this book, the publisher and author assume no responsibility for errors or omissions. Nor is any liability assumed for damage resulting from the use of the information contained herein.

# ಪರಿವಿಡಿ


| | | |
|---|---|---|
| 1. | ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು<br>ಕೆ.ವಿಜಯಲಕ್ಷ್ಮಿ | 1 |
| 2. | ಚಪ್ಪಲಿಗಳು: ಮಹಿಳಾ ಬದುಕಿನ ತೊಳಲಾಟ<br>ಡಾ. ವಡ್ಡೆ ಹೇಮಲತಾ | 3 |
| 3. | ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು<br>ಶ್ರೀಧರ್ ಸಿ. | 6 |
| 4. | ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು.<br>( ಪ್ರಧಾನವಾಗಿ ಸ್ತ್ರೀ ಪ್ರಧಾನ ದೈಹಿಕ ಸಂಬಂಧಗಳು)<br>ಶಿವಕುಮಾರ ಡಿ.ಸಿ. | 10 |
| 5. | ಆಧುನಿಕ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳ ಸ್ವರೂಪ<br>ಡಾ.ಬಿ.ಎಸ್.ಶಾರದ | 13 |
| 6. | ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು<br>ರೋಜಾ ಎ. | 17 |
| 7. | ಹೊಸಗನ್ನಡ ಕಥನ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಹೆಜ್ಜೆ ಗುರುತುಗಳು<br>ಡಾ.ಬಿ.ಕೆ.ಮಂಜುಳ | 19 |
| 8. | ಮಹಿಳಾ ಪೌರಾಣಿಕ ಕಾದಂಬರಿಗಳಲ್ಲಿ ಸ್ತ್ರೀವಾದದ ಹೆಜ್ಜೆ ಗುರುತುಗಳು<br>ಕಮಲಾಬಾಯಿ ಎಸ್ ಕುಂಬಾರ | 23 |
| 9. | ಹೊಸಗನ್ನಡ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯ<br>ಡಾ.ಚಂದ್ರಕಲಾ ಎಚ್.ಆರ್. | 28 |
| 10. | ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ತಾತ್ವಿಕ ಸ್ವರೂಪ<br>ಡಾ. ಎಸ್ ಸುಜಾತ | 33 |
| 11. | ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು<br>ಸುರೇಶ ಜಿ.ಎಚ್. | 38 |
| 12. | ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು<br>ಶ್ರೀಮತಿ ಸುಮಂಗಲಾ ಕೆ. | 42 |
| 13. | ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು (ಡಾ.ವಿಜಯಾದಬ್ಬೆಯವರ: ನೀರು ಲೋಹದ ಚಿಂತೆ–ಕೃತಿ ಕುರಿತು )<br>ಡಾ.ಶೋಭಾ.ಎಂ.ಸಿ | 47 |
| 14. | ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ ಹುಟ್ಟು ಮತ್ತು ಪ್ರೇರಣೆ<br>ಸವಿತ.ವಿ | 51 |
| 15. | ಅಸ್ಮಿತೆಯ ಚಹರೆಗಳು ವೈದೇಹಿಯವರ 'ಅಲೆಗಳಲ್ಲಿ ಅಂತರಂಗ' ವನ್ನು ಅನುಲಕ್ಷಿಸಿ ಪ್ರವೇಶಿಕೆ<br>ದಾಕ್ಷಾಯಣಿ ಬಿ.ಎಸ್. | 55 |

# ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ ಹುಟ್ಟು ಮತ್ತು ಪ್ರೇರಣೆ

**ಸವಿತ.ವಿ***

19ನೇ ಶತಮಾನದ ಕನ್ನಡ ಸಾಹಿತ್ಯವು ಅನೇಕ ಹೊಸ ಚಿಂತನೆಗಳನ್ನು ರೂಪಿಸುತ್ತಲೇ ವಿಶಿಷ್ಟವಾಗಿ ಬೆಳೆಯಿತು. ಹೊಸಗನ್ನಡ ಎಂಬುದು ಭಾಷೆ ಹಾಗೂ ಸಾಹಿತ್ಯದ ಹಂತದಲ್ಲಿ ಹೊಸ ಚಿಂತನೆಯ ಮೂಲಕ ಬದಲಾವಣೆಯತ್ತ ಸಾಗುವ ಸಂಕ್ರಮಣದ ಸ್ಥಿತಿ. ಬ್ರಿಟಿಷರ ಆಳ್ವಿಕೆಯ ನಡುವೆ ಅವರ ಸಂಸ್ಕೃತಿಯಿಂದ ಪಡೆದ ಪ್ರಭಾವ ಕನ್ನಡ ಸಮಾಜದ ಹಲವು ವಿಷಯಗಳಿಗೆ ಹೊಸತನ ನೀಡಿತು. ಶಿಕ್ಷಣ, ಸ್ತ್ರೀ ಶಿಕ್ಷಣ, ಸ್ತ್ರೀ ಸ್ವಾತಂತ್ರ್ಯ, ಧರ್ಮ, ಆಚಾರ-ವಿಚಾರ, ಭಾಷೆ, ವಿಜ್ಞಾನ ಈ ಎಲ್ಲವೂ ಹೊಸಗನ್ನಡ ಚಿಂತನೆಯಲ್ಲಿ ಮೈತಳೆದವು. ಇದಕ್ಕೆ ಸಾಹಿತ್ಯದ ಮುಖೇನ ಉಂಟಾದ ಹೊಸ ಚಿಂತನೆಗಳೆ ಹೊಸಗನ್ನಡ ಸಾಹಿತ್ಯ ಚಿಂತನೆಗಳು. ಆದ್ದರಿಂದ ಪ್ರಸ್ತುತ ಲೇಖನದಲ್ಲಿ ಸ್ತ್ರೀ ಪರ ಚಿಂತನೆಗಳು ಕನ್ನಡ ಸಾಹಿತ್ಯವನ್ನು ಪ್ರವೇಶಿದ ಬಗೆ ಹಾಗೂ ಅದಕ್ಕೆ ದೊರೆತ ಪ್ರೇರಣೆಗಳನ್ನು ಕುರಿತು ಸೂಕ್ಷ್ಮವಾಗಿ ಚರ್ಚಿಸಲಾಗಿದೆ.

ವಸಾಹತುಶಾಹಿ ವ್ಯವಸ್ಥೆಯು ಭಾರತೀಯ ಸಾಮಾಜಿಕ ಪರಿಸರದ ಮೇಲೆ ಉಂಟುಮಾಡಿದ ಪ್ರಭಾವ ಪ್ರಮುಖವಾದದ್ದು. ಅಧಿಕಾರದ ಚುಕ್ಕಾಣಿಯನ್ನು ಹಿಡಿಯುವ ಹಿನ್ನೆಲೆಯಲ್ಲಿ ಅನೇಕ ಬದಲಾವಣೆಗಳು, ಜಾತಿ ವ್ಯವಸ್ಥೆ, ಶಿಕ್ಷಣ, ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಅಧಿಕಾರ ಅಸ್ತಾಂತರ, ಬಾಲ್ಯ ವಿವಾಹ ಮುಂತಾದ ವಿಚಾರ ಕುರಿತಂತೆ ಬದಲಾವಣೆ ತರುವ ಯತ್ನ ನಡೆಸಿದರು. ಉದಾಹರಣೆಗೆ '1856ರಲ್ಲಿ ಬ್ರಿಟಿಷರು ತಂದ ವಿಧವಾ ವಿವಾಹಕ್ಕೆ ಸಂಬಂಧಿಸಿದಂತೆ 12ನೇ ಆಕ್ಟನ್ನು ಗಮನಿಸಬಹುದು.' ಇವರು ಸ್ತ್ರೀಯರಿಗೂ ಶಿಕ್ಷಣ ನೀಡಬೇಕೆಂದು ಪ್ರಯತ್ನಿಸಿದರು. ಇಂಗ್ಲಿಷ್ ಮಾದರಿಯ ಶಿಕ್ಷಣದ ಜೊತೆಗೆ ಇಂಗ್ಲಿಷ್ ಭಾಷೆಯನ್ನು ಕಲಿಸಿದರು. ಅಲ್ಲದೆ ಅವರ ಸಾಹಿತ್ಯದ ಪರಿಚಯ ನೀಡಿದರು.

ಇಂತಹ ಒಂದು ಬದಲಾವಣೆ ಕನ್ನಡ ಸಾಹಿತ್ಯಕ್ಕೆ ಅಗತ್ಯವಾಗಿತ್ತು. ಕೂಪಮಂಡೂಕದಂತಿದ್ದ ಮನಸ್ಥಿತಿಗೆ ಜಗತ್ತಿನ ಹೊಸ ಮಾದರಿಯ ಜೀವನ ಕ್ರಮದ ಪರಿಚಯವಾಯಿತು. ಅಲೌಕಿಕ ಮತ್ತು ಅಸಂಭವನೀಯ ವಿಚಾರಗಳ ಬಗೆಗಿನ ಚಿಂತನೆಗಿಂತ ಕಾದಂಬರಿಯ ವಸ್ತು ವಾಸ್ತವಿಕ ವಿಚಾರಗಳು, ಸಮಸ್ಯೆಗಳು ಅಲ್ಲದೆ ಮಾನವೀಯ ಮೌಲ್ಯಗಳನ್ನು ಒಳಗೊಂಡಿರಬೇಕು. ಕೇವಲ ಇಂಗ್ಲಿಷ್ ಕಾದಂಬರಿಗಳಷ್ಟೇ ಅಲ್ಲದೆ ಅನೇಕ ವೈಚಾರಿಕ ಲೇಖನಗಳು ಅನುವಾದಗೊಂಡು ಅನೇಕ ಸಾಮಾಜಿಕ ವಿಚಾರಗಳ ಮೇಲೆ ಹೊಸ ಆಲೋಚನೆಗಳು ಮೂಡುವಂತೆ ಮಾಡಿದವು. ಅವುಗಳಲ್ಲಿ ಪ್ರಮುಖವಾದ ಲೇಖನಗಳೆಂದರೆ 'ಹೆಣ್ಣು ಮಕ್ಕಳ ಬಲತ್ಕಾರ ವಿದ್ಯಾಭ್ಯಾಸ', 'ಅಬಲೋನ್ನತಿ ಮಾಲಾ', 'ಬರೋಡಾ ಸಂಸ್ಥಾನದಲ್ಲಿನ ವಿದ್ಯಾಭ್ಯಾಸ', 'ಹಿಂದೂ ದೇಶದ ಸ್ತ್ರೀಯರು' ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಯಿತು. ರೊದ್ದ ತಿರುಮಲಾರ್ಯನು 'ಸ್ತ್ರೀ ಶಿಕ್ಷಣದ ಅವಶ್ಯಕತೆ'ಯನ್ನು ಕುರಿತಂತೆ ಗ್ರಂಥವೊಂದನ್ನು ರಚಿಸಿದನು. ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿನ ಸ್ತ್ರೀಪರ ಚಿಂತನೆಗಳನ್ನು ಕುರಿತು ಬರೆದ ಲೇಖನಗಳು ಅನುವಾದವಾದವು. ಇದರಲ್ಲಿ ಮರಾಠಿಯ ಪಂಡಿತ ರಮಾಬಾಯಿಯ 'ಸ್ತ್ರೀ ಧರ್ಮನೀತಿ' ಪುಸ್ತಕವು ಅನುವಾದಗೊಂಡು ಮೈಸೂರಿನ ಬಲಿಕಾ ಪಾಠಶಾಲೆಯಲ್ಲಿ ಪಠ್ಯವಾಯಿತು. ಈ ಲೇಖನಗಳಲ್ಲಿ ವ್ಯಕ್ತವಾದಂತಹ ವಿಚಾರಗಳು ಕನ್ನಡ ಕಾದಂಬರಿಯ ಮೇಲೆ ಪ್ರಭಾವ ಉಂಟುಮಾಡಿದವುಗಳಲ್ಲಿ ಒಂದು.

ಸ್ತ್ರೀ ಶಿಕ್ಷಣ ಹಾಗೂ ಸ್ವಾತಂತ್ರ್ಯ ಕುರಿತಂತೆ ವಿದೇಶಿಯರಲ್ಲಿ ಇದ್ದ ಧೋರಣೆಗೂ: ಭಾರತೀಯರ ಮನಸ್ಥಿತಿಗೂ ಸಾಕಷ್ಟು ವ್ಯತ್ಯಾಸವಿತ್ತು. ಇಲ್ಲಿ ಸ್ತ್ರೀ ಶಿಕ್ಷಣ ಕುರಿತು ಮಾತುಗಳನ್ನಾಡುತ್ತಿದ್ದರೂ ಆ ಶಿಕ್ಷಣ ಆಕೆಯ ಕೌಟುಂಬಿಕ ಅಭಿವೃದ್ಧಿಗಾಗಿ ಮಾತ್ರ. ಆದರೆ ಪಾಶ್ಚಿಮಾತ್ಯ ಚಿಂತನೆಯೇ ಬೇರೆಯಾಗಿತ್ತು. ಭಾರತೀಯ ಪರಿಸರ ಸ್ತ್ರೀಯರಿಗೆ ಸ್ವಾತಂತ್ರ್ಯದ ಜೊತೆಗೆ ಅದರ ಎಲ್ಲೆಯನ್ನೂ ನಿಗದಿಪಡಿಸಿದ್ದರು. ಇಂದಿರಾ ಕಾದಂಬರಿಯ ಮುನ್ನುಡಿಯನ್ನು ಇಲ್ಲಿ ನೆನಪಿಸಬಹುದು.

ಸ್ತ್ರೀ ಶಿಕ್ಷಣದ ಮಹತ್ವವನ್ನು ಕುರಿತಂತೆ 'ಹೆಣ್ಣುಮಕ್ಕಳ ಬಲತ್ಕಾರ ವಿದ್ಯಾಭ್ಯಾಸ' ಎಂಬ ಲೇಖನವನ್ನು ಪ್ರಕಟಿಸಿದರು. ಇದರಲ್ಲಿ ಯೂರೋಪಿನ ರಾಷ್ಟ್ರಗಳಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಮತ್ತು ಅದರಿಂದಾಗುವ ಪ್ರಯೋಜನವನ್ನು ಕುರಿತು "ವಿದ್ಯಾವತಿಯರಾದ ತಾಯಿಯರಿರುವ ಯೂರೋಪ್ ಖಂಡದಲ್ಲಿ ಮಕ್ಕಳು ಸುಶಿಕ್ಷಿತರಾಗಿ ಬೆಳೆವುದರ ದೆಶೆಯಿಂದಲೇ ಆ ಖಂಡದಲ್ಲಿರುವ ಜನರು ಈ ಭೂಮಂಡಲವನ್ನೆಲ್ಲಾ ಅಲ್ಲಾಡಿಸುವಷ್ಟು ಎಂದರೆ ಬೆರಗುಪಡಿಸುವಷ್ಟು ಚತುರರಾಗಿರುವರು. ಈ ದೇಶದಲ್ಲಾರೋ ವಿದ್ಯೆ ಕಲಿಯದಿರುವ ತಾಯಿಯರೆ ಬಹಳ. ಅವರು ಮಕ್ಕಳು ಶಿಕ್ಷಣಕ್ಕೆ ಗಮನಕೊಡುವುದೂ ಕಡಿಮೆ. ಮಕ್ಕಳು ಹೇಗಾದರೂ ಬೆಳೆದರೆ ಸಾಕೆಂದು ಉದಾಸೀನರಾಗುವುದರಿಂದಲೂ ಕೆಲವರು ಚಿಕ್ಕ ಮಕ್ಕಳಿಗೆ ವಿನೋದಕ್ಕೆಂದು ಸುಳ್ಳು ಹೇಳುವ, ಮೋಸ ಮಾಡುವ, ಹಟಹಿಡಿಯುವ, ಸೋಮಾರಿಗಳಾಗುವ ಅಥವಾ ಜಿತೇಂದ್ರಿಯರಾಗದೇ ಇರುವುದಕ್ಕೆ ಅವಕಾಶವಾಗುವ ಮಾತುಗಳನ್ನೇ ಆಗಾಗ್ಗೆ ಕಲಿಸುತ್ತಾ ಅವರ ಸ್ವಭಾವವನ್ನು ಕೆಡಿಸುವರು......... ತಾಯಿಯರು ವಿದ್ಯಾವತಿಯರಾಗುವುದರಿಂದ ಮಕ್ಕಳನ್ನು ಸುಶಿಕ್ಷೆಯಲ್ಲಿಡುವುದಕ್ಕೆ ಅನುಕೂಲವಾಗುವುದೆಂಬುದೊಂದೇ ಅಲ್ಲ ಇನ್ನೂ ಅನೇಕ ಪ್ರಯೋಜನಗಳು ಇರುವುವು." (ವಿದ್ಯಾಬಾಯಸ-ಪು. 247). ಈ ಆಲೋಚನೆಯು ಇಂದಿರಾ, ಭಾಗೀರಥಿಯಂತಹ ಕಾದಂಬರಿಗಳಲ್ಲಿ ಅಭಿವ್ಯಕ್ತವಾಯಿತು.

* ಪ್ರಾಧ್ಯಾಪಕಿ, ಕನ್ನಡ ವಿಭಾಗ,, ನ್ಯಾಷನಲ್ ಕಾಲೇಜು, ಜಯನಗರ, ಬೆಂಗಳೂರು-70, ಮೊ-9379112202, ಇ-ಅಂಚೆ-n.ninada@gmail.com